## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 607 |
| 2. | ಸದಸ್ಯರ ಹೆಸರು | : | ಶ್ರೀ ಅ. ದೇವೇಗೌಡ<br>(ಪದವೀಧರರ ಕ್ಷೇತ್ರ) |
| 3. | ಉತ್ತರಿಸುವ ದಿನಾಂಕ | : | 04-03-2021 |
| 4. | ಉತ್ತರಿಸುವವರು | : | ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರತಿ ದಿವಸ ಉತ್ಪಾದನೆ ಆಗುವ ಘನತ್ಯಾಜ್ಯವನ್ನು ಪರಿಷ್ಕರಿಸಿ, ಜೈವಿಕ ಅನಿಲ ಮತ್ತು ರಸಗೊಬ್ಬರ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲಾಗಿದ್ದು ಇವುಗಳಿಂದ ಉತ್ಪತ್ತಿಯಾಗಿರುವ ಒಟ್ಟು ಇಂಧನ ಎಷ್ಟು; ಹಾಗೂ ಉತ್ಪತ್ತಿಯಾಗಿರುವ ರಸಗೊಬ್ಬರದ ಒಟ್ಟು ಪ್ರಮಾಣ ಎಷ್ಟು; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿದಿನ ಉತ್ಪಾದನೆಯಾಗುವ ಘನತ್ಯಾಜ್ಯ ಸಂಸ್ಕರಣೆಯನ್ನು ಹಲವಾರು ವಿಧಗಳಲ್ಲಿ ಮಾಡಲಾಗುತ್ತಿದೆ. ಸಾವಯವ ಗೊಬ್ಬರವನ್ನು ಪಾಲಿಕೆಯಲ್ಲಿನ ಕೇಂದ್ರೀಕೃತ ಸಂಸ್ಕರಣಾ ಘಟಕಗಳಲ್ಲಿ ಉತ್ಪಾದನೆ ಮಾಡಲಾಗುತ್ತಿದ್ದು, ಪ್ರತಿದಿನ ಸರಾಸರಿ 1000 ರಿಂದ 1200 ಟನ್‌ರಷ್ಟು ಸಂಸ್ಕರಣೆಯನ್ನು ಮಾಡಲಾಗುತ್ತಿದೆ. ಈ ಸಂಸ್ಕರಣೆಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 7 ಘನತ್ಯಾಜ್ಯ ಘಟಕಗಳಾದ ಚಿಕ್ಕನಾಗಮಂಗಲ, ದೊಡ್ಡಬಿದರಕಲ್ಲು, ಲಿಂಗಧೀನರಹಳ್ಳಿ, ಕನ್ನಳ್ಳಿ, ಸೀಗೆಹಳ್ಳಿ, ಸುಬ್ಬರಾಯನಪಾಳ್ಯ ಮತ್ತು ಕೆಸಿಡಿಸಿ ಘಟಕಗಳಿಂದ 2017-18 ನೇ ಸಾಲಿನಿಂದ ಈವರೆವಿಗೂ (ಜನವರಿ 2021) ಒಟ್ಟಾರೆ 36,267 ಮೆ.ಟನ್ ಸಾವಯವ ಗೊಬ್ಬರ ಉತ್ಪಾದನೆ ಮಾಡಲಾಗಿರುತ್ತದೆ.<br><br>ಅದರಂತೆ, ವಿಕೇಂದ್ರಿಕೃತ ಜೈವಿಕ ಅನಿಲ ಉತ್ಪಾದನೆ ಮಾಡುವ 5 ಟನ್ ಸಾಮರ್ಥ್ಯದ ಘನತ್ಯಾಜ್ಯವನ್ನು ಸಂಸ್ಕರಿಸುವ ಒಟ್ಟು 13 ಘಟಕಗಳನ್ನು 2015ರಲ್ಲಿ ಸ್ಥಾಪಿಸಲಾಗಿರುತ್ತದೆ. ಅವುಗಳಲ್ಲಿ ಪ್ರಸ್ತುತ 5 ಘಟಕಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ. ಈ 5 ಘಟಕಗಳಿಂದ ಉತ್ಪಾದನೆಯಾಗುವ ಜೈವಿಕ ಅನಿಲದಿಂದ ವಿದ್ಯುತ್ ಉತ್ಪಾದನೆಯನ್ನು ಮಾಡಿ, ಸದರಿ ಘಟಕ ಹಾಗೂ ಸುತ್ತಮುತ್ತಲಿನ ಪ್ರದೇಶದ ಬೀದಿ ದೀಪಗಳನ್ನು ಉರಿಸುವುದಕ್ಕಾಗಿ ಬಳಸಲಾಗುತ್ತಿದೆ. ಇನ್ನುಳಿದಂತೆ 7 ಘಟಕಗಳು ಪ್ರಸ್ತುತ ಕಾರ್ಯನಿರ್ವಹಣೆಯಾಗದೇ ಸ್ಥಗಿತಗೊಂಡಿರುತ್ತದೆ. ಸದರಿ 7 ಘಟಕಗಳನ್ನು ಉನ್ನತೀಕರಣಗೊಳಿಸಿ ಕಾರ್ಯಗತಗೊಳಿಸಲು ಈಗಾಗಲೇ ನೂತನವಾಗಿ ಟೆಂಡರ್ ಕರೆಯಲಾಗಿರುತ್ತದೆ. |

. . .2/-

| | | |
|---|---|---|
| ಆ | ಘನತ್ಯಾಜ್ಯ ಪರಿಷ್ಕರಿಸಿ ಜೈವಿಕ ಅನಿಲ ಘಟಕದಿಂದ ಉತ್ಪತ್ತಿಯಾಗುತ್ತಿರುವ ಇಂಧನ ಹಾಗೂ ರಸಗೊಬ್ಬರ ಮಾರಾಟದಿಂದ ಪಾಲಿಕೆಗೆ ಬರುತ್ತಿರುವ ಒಟ್ಟು ಆದಾಯ ಎಷ್ಟು? (ಪೂರ್ಣ ಮಾಹಿತಿ ನೀಡುವುದು). | ಘನತ್ಯಾಜ್ಯವನ್ನು ಸಂಸ್ಕರಿಸಿ ಜೈವಿಕ ಅನಿಲ ಘಟಕದಿಂದ ಉತ್ಪತ್ತಿಯಾಗುತ್ತಿರುವ ಇಂಧನ / ವಿದ್ಯುತ್ ಅನ್ನು ಯಾವುದೇ ತರಹದ ಮಾರಾಟ ಮಾಡಲಾಗುತ್ತಿರುವುದಿಲ್ಲ. ಬದಲಾಗಿ ಸದರಿ ಇಂಧನ / ವಿದ್ಯುತ್ ಅನ್ನು ಸದರಿ ಘಟಕದಲ್ಲಿಯೇ ಉಪಯೋಗಿಸಲಾಗುತ್ತಿದೆ ಹಾಗೂ ಬೀದಿ ದೀಪಗಳನ್ನು ಉರಿಸಲಾಗುತ್ತಿದೆ.<br><br>ಘನತ್ಯಾಜ್ಯ ಘಟಕಗಳಿಂದ ಉತ್ಪತ್ತಿಯಾಗುವ ಸಾವಯವ ಗೊಬ್ಬರದಿಂದ 2017-18ನೇ ಸಾಲಿನಿಂದ ಜನವರಿ 2021ರವರೆಗೆ ರೂ.4,99,11,344/- ಗಳ ಆದಾಯ ಪಾಲಿಕೆಗೆ ಬಂದಿರುತ್ತದೆ. |

**ಸಂಖ್ಯೆ: ನಅಇ 53 ಎಂಎನ್‌ವೈ 2021 (ಇ)**

(ಸಹಿ)
**(ಬಿ.ಎಸ್. ಯಡಿಯೂರಪ್ಪ)**
**ಮುಖ್ಯಮಂತ್ರಿ**